ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 4 ತೋಸೇಪ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 6-9-2017

ಅಧಿಸೂಚನೆ

ತೋಟಗಾರಿಕೆ ಇಲಾಖೆಯ ಈ ಕೆಳಕಂಡ ತೋಟಗಾರಿಕೆ ಉಪ ನಿರ್ದೇಶಕರುಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ: 40050-1050-45300-1200-52500-1350-56550 ರ ತೋಟಗಾರಿಕೆ ಜಂಟಿ ನಿರ್ದೇಶಕರು ವೃಂದದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 32 ರಡಿ ಕೆಳಕಂಡ ಷರತ್ತುಗೊಳಪಟ್ಟು ಸ್ವತಂತ್ರ ಪ್ರಭಾರದಲ್ಲಿರಿಸಿ ಅವರುಗಳ ಹೆಸರುಗಳ ಮುಂದೆ ಸೂಚಿಸಿರುವ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಳನಿಯುಕ್ತಿಗೊಳಿಸಿ ನೇಮಿಸಲಾಗಿದೆ.

ತೋಟಗಾರಿಕೆ ನಿರ್ದೇಶಕರು
ಸಂಖ್ಯೆ 772
ದಿನಾಂಕ 08/9/17
ಲಾಲ್‌ಬಾಗ್, ಬೆಂಗಳೂರು-04

| ಕ್ರ.ಸಂ | ಅಧಿಕಾರಿ ಹೆಸರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ | ಕ.ನಾ.ಸೇ ನಿಯಮಗಳ ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ತೋಟಗಾರಿಕೆ ಜಂಟಿ ನಿರ್ದೇಶಕರು ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ನೇಮಿಸಲಾದ ಸ್ಥಳ |
|---|---|---|
| 1 | ಸೋಮಶೇಖರ್ ಎಸ್.ಹುಲ್ಲೊಳ್ಳಿ, ತೋಉನಿ, ಸ್ಥಳ ನಿರೀಕ್ಷಣೆಯಲ್ಲಿರುವ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾಂಬಾರು ಪದಾರ್ಥ ಅಭಿವೃದ್ಧಿ ಮಂಡಳಿ, ಹುಬ್ಬಳ್ಳಿ ಇಲ್ಲಿ ಖಾಲಿ ಇರುವ ಹುದ್ದೆಗೆ |
| 2 | ಹೆಚ್.ಎನ್.ಹೇಮಾ, ತೋಉನಿ, ತೋಜಂನಿ (ಯೋಜನೆ), ಲಾಲ್ ಬಾಗ್, ಬೆಂಗಳೂರು | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತೋಟಗಾರಿಕೆ ಮಹಾ ಮಂಡಳಿ (ಕೆ.ಹೆಚ್.ಎಫ್), ಬೆಂಗಳೂರು ಇಲ್ಲಿ ಖಾಲಿ ಇರುವ ಹುದ್ದೆಗೆ |
| 3 | ಎಂ.ವಿಶ್ವನಾಥ್, ತೋಟಗಾರಿಕೆ ಉಪ ನಿರ್ದೇಶಕರು, ಹಾಪ್ ಕಾಮ್ಸ್ ಬೆಂಗಳೂರು | ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ತೋಟಗಾರಿಕೆ ಇಲಾಖೆ, ದಾವಣಗೆರೆ, ಇಲ್ಲಿ ಖಾಲಿ ಇರುವ ಹುದ್ದೆಗೆ |
| 4 | ವಿಶ್ವನಾಥ್, ತೋಉನಿ, ಸುಜಲಾ,ಯೋಜನೆ-3, ಬೀದರ್ | ವ್ಯವಸ್ಥಾಪಕ ನಿರ್ದೇಶಕರು, ಹಾಪ್ ಕಾಮ್ಸ್, ಬೆಂಗಳೂರು, ಇಲ್ಲಿ ಖಾಲಿ ಇರುವ ಹುದ್ದೆಗೆ |
| 5 | ಬಿ. ಆರ್.ಗಿರೀಶ್, ತೋಉನಿ(ಜಿಪ) ಮಡಿಕೇರಿ ಜಿಲ್ಲೆ | ತೋಟಗಾರಿಕೆ ಜಂಟಿ ನಿರ್ದೇಶಕರು, ನರೇಗಾ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಹುದ್ದೆಗೆ ನಿಯೋಜನೆ ಮೇಲೆ ನೇಮಿಸಲು ಇವರ ಸೇವೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಶಕ್ಕೆ ನೀಡಿದೆ. |

..2

Add Dir (A) 7/9/17

| | | |
|---|---|---|
| 6 | ಎಸ್.ಬಿ.ದಿಡ್ಡಿಮನಿ,<br>ತೋಉನಿ (ಜಿಪ) ಧಾರವಾಡ | ಜಂಟಿ ನಿರ್ದೇಶಕರು,<br>ವಿಭಾಗೀಯ ಕಛೇರಿ, ತೋಟಗಾರಿಕೆ ಇಲಾಖೆ,<br>ಕಲಬುರಗಿ, ಇಲ್ಲಿ ಖಾಲಿ ಇರುವ ಹುದ್ದೆಗೆ |
| 7 | ಹೆಚ್.ಎಂ.ನಾಗರಾಜು,<br>ತೋಉನಿ (ಜಿಪ) ಚಾಮರಾಜನಗರ | ಜಂಟಿ ನಿರ್ದೇಶಕರು,<br>ವಿಭಾಗೀಯ ಕಛೇರಿ, ತೋಟಗಾರಿಕೆ ಇಲಾಖೆ,<br>ಮೈಸೂರು, ಇಲ್ಲಿ ಖಾಲಿ ಇರುವ ಹುದ್ದೆಗೆ |

ಷರತ್ತುಗಳು

1. ನಿಯಮ 32 ರಡಿ ಮಾಡಲಾಗುವ ಸ್ವತಂತ್ರ ಪ್ರಭಾರ ವ್ಯವಸ್ಥೆಯು ಕ್ರಮಬದ್ಧ ಮುಂಬಡ್ತಿಗೆ ಬದಲಿ ಮಾಡುವ ಒಂದು ತಾತ್ಕಾಲಿಕ ವ್ಯವಸ್ಥೆಯಾಗಿದೆ. ಅದು ಮುಂಬಡ್ತಿ ಅಲ್ಲ. ಸ್ವತಂತ್ರ ಪ್ರಭಾರದಲ್ಲಿರಿಸುವ ಆದೇಶವನ್ನು ಯಾವುದೇ ಸಂದರ್ಭದಲ್ಲಾದರೂ ಹಿಂದಕ್ಕೆ ಪಡೆಯಲು ಆಸ್ಪದವಿರುತ್ತದೆ.
2. ಈ ವ್ಯವಸ್ಥೆಯು ತಾತ್ಕಾಲಿಕವಾಗಿದ್ದು, ಪೂರ್ವಾನ್ವಯ ಮುಂಬಡ್ತಿಗೆ ಹಕ್ಕೊತ್ತಾಯ ಮಾಡುವಂತಿಲ್ಲ.
3. ಈ ವ್ಯವಸ್ಥೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿ:9-2-2017 ರಂದು ಸಿವಿಲ್ ಅಪೀಲ್ ಸಂಖ್ಯೆ 2368/2011 ರಲ್ಲಿ ಶ್ರೀ ಬಿ.ಕೆ. ಪವಿತ್ರ ಪ್ರಕರಣದಲ್ಲಿ ನೀಡಿರುವ ತೀರ್ಪಿನ ವಿರುದ್ಧ ಸಲ್ಲಿಸಲಾಗಿರುವ ಪುನರ್ ಪರಿಶೀಲನಾ ಅರ್ಜಿಯ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
4. ಸ್ಥಳನಿಯುಕ್ತಿ / ನೇಮಕಗೊಂಡ ಅಧಿಕಾರಿಗಳು ಇಲಾಖೆಗಳಲ್ಲಿ ಕಾರ್ಯವರದಿ ಮಾಡಿಕೊಂಡ ಕೂಡಲೇ ಸಿಟಿಸಿ ಪ್ರತಿಯನ್ನು ಖಡ್ಡಾಗಿ ತೋಟಗಾರಿಕೆ ಇಲಾಖೆಗೆ ಒದಗಿಸುವಂತೆ ಸೂಚಿಸಿದೆ.

ಭಾಗ

ಶ್ರೀಮತಿ ಬಿ.ಕೆ.ರಂಜನ, ತೋಟಗಾರಿಕೆ ಉಪ ನಿರ್ದೇಶಕರು, ನಿಯೋಜನೆ ಮೇಲೆ ತೋಟಗಾರಿಕೆ ಜಂಟಿ ನಿರ್ದೇಶಕರು, ನರೇಗಾ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಆರ್.ಡಿ.ಪಿ.ಆರ್, ಇವರ ಸೇವೆಯನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಿಂಪಡೆದು, ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಶ್ರೀಮತಿ ಹೆಚ್.ಎನ್.ಹೇಮಾ, ತೋಟಗಾರಿಕೆ ಉಪ ನಿರ್ದೇಶಕರು (ಯೋಜನೆ) ಲಾಲ್ ಬಾಗ್,ಬೆಂಗಳೂರು, ಇವರಿಂದ ತೆರವಾಗುವ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

R. Mahadeva 06/9/17

(ಆರ್.ಮಹಾದೇವ)

ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

6/9/17

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಎ & ಇ)/(ಜಿ & ಎಸ್.ಎಸ್.ಎ)/ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಧ್ಯಕ್ಷರು, ಕರ್ನಾಟಕ ರಾಜ್ಯ ಸಾಂಬಾರು ಅಭಿವೃದ್ಧಿ ಮಂಡಳಿ, ಹುಬ್ಬಳ್ಳಿ
4. ಆಯುಕ್ತರು, ತೋಟಗಾರಿಕೆ ಆಯುಕ್ತರ ಕಛೇರಿ, ಕೆಂಪುತೋಟ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹೂಜೂರ್ ಖಜಾನೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಹಾಪಕಾಮ್ಸ್, ಲಾಲ್ ಬಾಗ್,ಬೆಂಗಳೂರು.
7. ಸಂಬಂಧಪಟ್ಟ ಅಧಿಕಾರಿಗಳಿಗೆ (ತೋಟಗಾರಿಕೆ ಆಯುಕ್ತರ ಮೂಲಕ)
8. ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ.
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ತೋಟಗಾರಿಕೆ ಇಲಾಖೆ.
12. ಹೆಚ್ಚುವರಿ ಪ್ರತಿ/ರಕ್ಷಾ ಕಡತ.